

# ಟಿಕ್ ಟಿಕ್ ಟಿಕ್...

## ಕಾಲದ ಜೊತೆಗೆ ಖಗೋಳ ದರ್ಶನ

ಪ್ರಾಗ್‌ನ ಖಗೋಳ ಗಡಿಯಾರ ವಿಶ್ವದ ಪ್ರಾಚೀನ ಗಡಿಯಾರಗಳಲ್ಲೊಂದು. ಸಮಯ ತೋರಿಸುವುದರ ಜೊತೆಗೆ ಖಗೋಳ ಶಾಸ್ತ್ರಕ್ಕೆ ಸಂಬಂಧಿಸಿದ ಹಲವು ಮಾಹಿತಿಗಳನ್ನೂ ಗಡಿಯಾರ ತೋರಿಸುತ್ತದೆ. ಈ ಗಡಿಯಾರ ಜೆಕ್ ಗಣರಾಜ್ಯದ ಪ್ರಮುಖ ಪ್ರವಾಸಿ ಆಕರ್ಷಣೆ.

■ ಎಸ್.ಪಿ. ವಿಜಯಲಕ್ಷ್ಮಿ

ಪುರಾತನ ಇತಿಹಾಸವಿರುವ, ಚಾರಿತ್ರಿಕ ಪ್ರತಿಷ್ಠೆಯುಳ್ಳ 'ಜ಼ೆಕ್' ದೇಶದ ರಾಜಧಾನಿ 'ಪ್ರಾಗ್' ನಗರ ರೂಪುಗೊಂಡಿರುವ ಶೈಲಿಯೇ ಅತ್ಯಾಕರ್ಷಕ. ಗೋಥಿಕ್ ಶೈಲಿಯ ರೋಮನಸ್ಕ್ ಚರ್ಚ್‌ಗಳು, ಬರೂಕ್ ಶೈಲಿಯ ಚಾರಿತ್ರಿಕ ಕಟ್ಟಡಗಳು, ಕಲಾತ್ಮಕ ಚಳವಳಿಯ ಫಲವಾದ 'ಆರ್ಟ್ ನೋವಾ' ವಿನ್ಯಾಸಗಳು, 'ವಿತಾವಾ' ನದಿಯ ಮೇಲಣ ಮನೋಹರ ಸೇತುವೆಗಳು, ಫ್ರಾಂಜ಼್ ಕಾಫ್ಕಾನ ವಿನೂತನ ಮ್ಯೂಸಿಯಂ, ಸೇತುವೆಯ ಸರಹದ್ದಲ್ಲಿ ಆಕರ್ಷಕ ಪ್ರತಿಮೆಗಳು, ಒಟ್ಟಲ್ಲಿ ಪ್ರಾಗ್ ಸಿಟಿ ಯೂರೋಪಿನ ಬೇರೆ ನಗರಗಳಿಗಿಂತ ಬೆಚ್ಚನೆಯ ಭಾವ, ಸಂಭ್ರಮ ಹೊಂದಿರುವ ನಗರ.

ಹದಿಮೂರು ಲಕ್ಷ ಜನಸಂಖ್ಯೆಯ ಪ್ರಾಗ್ ನಗರವನ್ನು ಜ಼ೆಕ್ ಭಾಷೆಯಲ್ಲಿ 'ಪ್ರಾಹಾ' ಎನ್ನುತ್ತಾರೆ. ಬರವಣಿಗೆಯಲ್ಲಿ, ಮಾತಿನಲ್ಲಿ ಅಲ್ಲಿನವರು ಹೀಗೆಂದೇ ಹೇಳುವುದು. ಪ್ರಾಗ್ ಎನ್ನುವುದು ಇಂಗ್ಲಿಷಿನ ರೂಪ. ಇಡೀ ನಗರ ಬೆಟ್ಟಗಳಿಂದ ಆವೃತವಾಗಿದ್ದು ಕಣಿವೆಯೋಪಾದಿಯಲ್ಲಿದೆ. ಈ ನಗರದ ಜೀವಾಳ 'ವಿತಾವಾ'ನದಿ ಹಾಗೂ ಅದಕ್ಕೆ ನಿರ್ಮಿಸಿರುವ ಚಾರ್ಲ್ಸ್ ಬ್ರಿಡ್ಜ್. ಸೇತುವೆಯ ಅಕ್ಕಪಕ್ಕದಲ್ಲಿ ನಗರವಿದ್ದರೆ ಅಥವಾ ಹಲವು ಸೇತುವೆಗಳಿದ್ದ ನಗರದ ಚಿತ್ರಣವಿದ್ದರೆ ಅದು ಈ ತಾಣವೇ ಆಗಿರುವುದನ್ನು



ಅನೇಕರು ಗಮನಿಸಿರಬಹುದು. ಹೌದು, 'ಪ್ರಾಗೇತಿಹಾಸ' ಬಿಚ್ಚಿಕೊಂಡಿರುವುದೇ ಈ ನದಿಯ ದಡದಲ್ಲಿ. ನಾಝಿ ಜರ್ಮನಿ, ಕಮ್ಯುನಿಸ್ಟ್ ಆಡಳಿತ ಸೇರಿದಂತೆ ಅನೇಕ ಘಟ್ಟಗಳನ್ನೂ ಹಾದುಬಂದ ಪ್ರಾಗ್ ನಗರ 1989ರ ಕ್ರಾಂತಿಯಲ್ಲಿ ರಾಜಕೀಯ ಪಲ್ಲಟ ಕಂಡು, 1993ರಲ್ಲಿ ಝೆಕೊಸ್ಲೋವೇಕಿಯಾದಿಂದ ಇಬ್ಭಾಗವಾದ 'ಝೆಕ್' ದೇಶದ ರಾಜಧಾನಿ ನಗರವಾಗಿದೆ. ಈ ಎಲ್ಲ ರಾಜಕೀಯ ಬದಲಾವಣೆಗಳು ವಿತಾವಾ ನದೀದಡದ ಸುತ್ತಮುತ್ತಲಲ್ಲೇ ನಡೆದಿವೆ.

ಪ್ರಾಗ್ ಚೆಲುವು ತಿಳಿಯಲು ಕಾಲ್ನಡಿಗೆಯೇ ಉತ್ತಮ. ಸುಮಾರು ಒಂಬತ್ತು ಗಂಟೆಗಳ ಕಾಲ ನಡೆಯುತ್ತಾ ನೋಡುವ, ಪಡೆಯುವ ಮಾಹಿತಿಗಳು, ಅನುಭವ ಅತ್ಯದ್ಭುತ. ಒಂದೊಂದೂ ಚಾರಿತ್ರಿಕ 'ಸಿನೆಗೋಗ್'ಗಳನ್ನು, ರಾಜಕೀಯ ಕಟ್ಟಡಗಳನ್ನೂ ನೋಡುತ್ತಾ ಬಂದಾಗ, ಆ ಎಲ್ಲದರ ಜೊತೆ, ಪ್ರವಾಸಿಗರ ಆಕರ್ಷಣೆಯ ಮಹತ್ವದ ಕೇಂದ್ರಬಿಂದು ನಿಸ್ಸಂಶಯವಾಗಿ ಅಲ್ಲಿಯ 'ಆಸ್ಟ್ರಾನಾಮಿಕಲ್ ಕ್ಲಾಕ್' (ಖಗೋಳ ಗಡಿಯಾರ). ಏನದು ಏನಿದು 'ಆಸ್ಟ್ರಾನಾಮಿಕಲ್ ಕ್ಲಾಕ್'?

1410ರಲ್ಲಿ ಸ್ಥಾಪನೆಯಾದ 'ಪ್ರಾಹಾ ಒರ್ಲೋಜ್' ಎಂದು ಕರೆಯಲಾಗುವ ಪ್ರಾಗ್‌ನ ಖಗೋಳ ಗಡಿಯಾರ ಪ್ರಪಂಚದ